ಯೋಚಿಸಿದೆಯೇ; ಹಾಗಿದ್ದಲ್ಲಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳೇನು; ಎಂದಿನಿಂದ ಹಮ್ಮಿಕೊಳ್ಳಲಾಗಿದೆ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಕೆಲವು ಭಕ್ತರು ತಮ್ಮ ಬುದ್ಧಿಮಾಂದ್ಯ ಮಕ್ಕಳನ್ನು ದರ್ಶನಕ್ಕೆ ಕರೆತಂದು ಸ್ಥಳದಲ್ಲಿ ಮಕ್ಕಳನ್ನು ಬಿಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹೌದು.

ಇ) ಇಲ್ಲಿಯವರೆವಿಗೆ ಇಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಈ) ಹೌದು. ಇಂತಹವರನ್ನು ಸಂರಕ್ಷಣೆ ಮಾಡುವ ಸಲುವಾಗಿ ಯಾತ್ರಾ ಸ್ಥಳದಿಂದ ದಿನಾಂಕ:16–9–2006 ರಂದು 12 ಜನ ಬುದ್ಧಿಮಾಂದ್ಯ ಹೆಣ್ಣು ಮಕ್ಕಳನ್ನು ದೇವಸ್ಥಾನದಿಂದ ಕರೆದುಕೊಂಡು ಗುಲ್ಬರ್ಗಾದಲ್ಲಿರುವ ಮಾನಸಗಂಗಾ ಬುದ್ಧಿಮಾಂದ್ಯ ಕುಟೀರಕ್ಕೆ ದಾಖಲು ಮಾಡಿ ಅವರಿಗೆ ಊಟ, ವಸತಿ ಮತ್ತು ಅವಶ್ಯಕ ಚಿಕಿತ್ಸೆಯನ್ನು ನೀಡಲಾಗಿರುತ್ತದೆ. ಬುದ್ಧಿ ಮಾಂದ್ಯ ಮಕ್ಕಳಿಗೆ ಗುಲ್ಬರ್ಗಾದಲ್ಲಿ ಒಂದು ವಸತಿನಿಲಯ ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ.

638 ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. (ಕೊಪ್ಪಳ) ಮತ್ತು ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನ ಲೋಕೋಪಯೋಗಿ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿನ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕಟ್ಟಡ:ರಸ್ತೆ;ಸೇತುವೆ ಕಾಮಗಾರಿಗಳ ವಿವರದ " Appendix-E" ಅನ್ನು ಸರ್ಕಾರ ಯಾವ ತಿಂಗಳಿನಲ್ಲಿ ಅನುಮೋದಿಸಿದೆ ;

ಆ) ಈ ಅನುಮೋದಿಸಿದ ಕಾಮಗಾರಿಗಳ ಪೈಕಿ ಎಷ್ಟಕ್ಕೆ ಅಂದಾಜುಪತ್ರಿಕೆ ತಯಾರಿಸಲಾಗಿದೆ ಹಾಗೂ ಯಾವ ಯಾವ ಕಾಮಗಾರಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ;

ಇ) ಇವುಗಳ ಪೈಕಿ ಯಾವ ಯಾವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ ಹಾಗೂ ಯಾವ ಯಾವ ಕಾಮಗಾರಿಗಳು ಪ್ರಾರಂಭವಾಗಿವೆ;

ಈ) ಇಲಾಖಾವಾರು ಕಾಮಗಾರಿಗಳ ಪೈಕಿ ಯಾವ ಯಾವ ಇಲಾಖೆಗಳ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಬಾಕಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) 2006–07ನೇ ಸಾಲಿನ ಲೋಕೋಪಯೋಗಿ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿನ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕಟ್ಟಡ:ರಸ್ತೆ: ಸೇತುವೆ ಕಾಮಗಾರಿಗಳ ವಿವರದ "Appendix-E" ಅನ್ನು ಆರ್ಥಿಕ ಇಲಾಖೆಯಿಂದ ಡಿಸೆಂಬರ್ 2006 ತಿಂಗಳಿನಲ್ಲಿ ಅನುಮೋದಿಸಲಾಗಿದೆ.

ಆ) ಅಂದಾಜು ಪತ್ರಿಕೆ:ಆಡಳಿತಾತ್ಮಕ:ತಾಂತ್ರಿಕ ಅನುಮೋದನೆಗೊಂಡ ಕಾಮಗಾರಿಗಳ ವಿವರ:

ವಲಯ	ಕಾಮಗಾರಿ	ಅಂದಾಜು ಪತ್ರಿಕೆ	ಆಡಳಿತಾತ್ಮಕ ಅನುಮೋದಿತ	ತಾಂತ್ರಿಕ ಮಂಜೂರಾತಿ
ದಕ್ಷಿಣ	ಕಟ್ಟಡ	573	307	307
	ರಸ್ತೆ	506	496	483
	ಸೇತುವೆ	10	10	10
ಉತ್ತರ	ಕಟ್ಟಡ	479	95	85
	ರಸ್ತೆ	111	58	49
	ಸೇತುವೆ	02	02	02

ಇ) ಟೆಂಡರ್ ಕರೆದ :ಪ್ರಾರಂಭಿಸಲಾದ ಕಾಮಗಾರಿಗಳು:

ವಲಯ	ಕಾಮಗಾರಿಗಳು	ಟೆಂಡರ್ ಕರೆಯಲಾದ ಕಾಮಗಾರಿಗಳು	ಪ್ರಾರಂಭವಾಗಿರುವ ಕಾಮಗಾರಿಗಳು
ದಕ್ಷಿಣ	ಕಟ್ಟಡ	307	307
	ರಸ್ತೆ	496	422
	ಸೇತುವೆ	10	10
ಉತ್ತರ	ಕಟ್ಟಡ	228	–
	ರಸ್ತೆ	126	–

ಈ) ಇಲಾಖಾವಾರು ಕಾಮಗಾರಿಗಳ ಪೈಕಿ, ಇತರೆ ಇಲಾಖೆಗಳ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಅನುಬಂಧ

2006–07ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರಗಳು

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	
	ರಸ್ತೆ ಮತ್ತು ಸೇತುವೆ	ದಕ್ಷಿಣ	ಉತ್ತರ
1	ಲೆ.ಶಿ. 5054–ಸೇತುವೆಗಳು	13.91	8.00
2	ಲೆ.ಶಿ. 5054– ಇತರೆ ರಸ್ತೆಗಳ ನಿರ್ಮಾಣ (ಜಿಲ್ಲಾ ಮುಖ್ಯ ರಸ್ತೆಗಳಿಗೆ ಡಾಂಬರೀಕರಣ)	3891.93	2000.00
3	ಲೆ.ಶಿ. 5054–ಮಂಡ್ಯ ಪ್ಯಾಕೇಜ್	1416.92	0.00
4	ಲೆ.ಶಿ. 5054–ಬಳ್ಳಾರಿ ಪ್ಯಾಕೇಜ್	28.34	450.00
5	ಲೆ.ಶಿ. 5054– ಸಕ್ಕರೆ ಕಾರ್ಖಾನೆಗಳ ರಸ್ತೆ ಅಭಿವೃದ್ಧಿ	50.00	50.00
6	ಲೆ.ಶಿ. 5054– ನಬಾರ್ಡ್ ರಸ್ತೆಗಳು	5750.00	6750.00
7	ಲೆ.ಶಿ. 5054– ನಬಾರ್ಡ್ ಸೇತುವೆಗಳು	1000.00	
8	ಲೆ.ಶಿ. 5054– ಬೆಂಗಳೂರು ನಗರದ ಸುತ್ತಮುತ್ತ ವಾಹನ ದಟ್ಟಣೆ ಕಡಿಮೆ ಮಾಡಲು ರಸ್ತೆ ಅಭಿವೃದ್ಧಿ	23830.00	0.00
9	ಲೆ.ಶಿ. 5054– ಕೇಂದ್ರ ರಸ್ತೆ ನಿಧಿ (CRF)	4000.00	4000.00
	ಕಟ್ಟಡಗಳು		
10	ಲೆ.ಶಿ. 4059– ವಸತಿಯೇತರ ಕಟ್ಟಡಗಳು	–	4001.15
11	ಲೆ.ಶಿ. 4216 – ವಸತಿ ಗೃಹ ನಿರ್ಮಾಣ ಕಟ್ಟಡಗಳು	–	507.77

12	ಲೆ.ಶಿ. 4220– ವಾರ್ತಾ ಮತ್ತು ಪ್ರಚಾರ ಇಲಾಖೆ	19.10	–
13	ಲೆ.ಶಿ. 4401– ಬೆಳೆ ಸಂವರ್ಧನೆ ಮತ್ತು ಸಸ್ಯ ಸಂಗೋಪನೆ	15.91	10.52
14	ಲೆ.ಶಿ. 4225 –ಎಸ್.ಸಿ.ಎಸ್.ಟಿ	–	97.05
15	ಲೆ.ಶಿ. 4250 – ಸಾಮಾಜಿಕ ಭದ್ರತಾ ಸೇವೆಗಳು	275.72	57.00
16	ಲೆ.ಶಿ. 4250– ಸಾಮಾಜಿಕ ಭದ್ರತಾ ಸೇವೆಗಳು–ಕಾರ್ಮಿಕ ಇಲಾಖೆ ಒದಗಿಸಿದ ಅನುದಾನ	256.00	
17	ಲೆ.ಶಿ. 4202– ಶಿಕ್ಷಣ ಇಲಾಖೆ	3121.44	1708.31
18	ಲೆ.ಶಿ. 4059– ನ್ಯಾಯಾಂಗ ಕಟ್ಟಡಗಳು	202.00	–
19	ಲೆ.ಶಿ. 4059– ಧಾರ್ಮಿಕ ದತ್ತಿ ಇಲಾಖೆ	500.00	–
20	ಲೆ.ಶಿ. 4059– ಸಾರಿಗೆ ಪ್ರಾದೇಶಿಕ ಸಾರಿಗೆ ಕಚೇರಿಗಳು	382.00	–
21	ಲೆ.ಶಿ. 4059– ಮಡಿಕೇರಿ ಪ್ರಾದೇಶಿಕ ಸಾರಿಗೆ ಕಟ್ಟಡಗಳು	200.00	–
22	ಲೆ.ಶಿ. 4059 –ನೊಂದಣಿ ಮತ್ತು ಮುದ್ರಾಂಕ ಇಲಾಖೆ	200.00	–
23	ಲೆ.ಶಿ. 4059– ಅಬಕಾರಿ ಇಲಾಖೆ	1000.00	–
24	ಲೆ.ಶಿ. 4217– ಗ್ರಾಮೀಣಾಭಿವೃದ್ಧಿ	–	30.00
25	ಲೆ.ಶಿ. 4235– ಸೈನಿಕ ವೆಲ್ ಫೇರ್ ಮತ್ತು ಸಾಮಾಜಿಕ ಭದ್ರತೆ	–	7.35